**ವ್ಯಾಖ್ಯಾನ**

# ಗುರುವಿನ ಗುಲಾಮನಾಗುವತನಕ

**Ref.**: Dasara Maatina Sobagu, by Dr. Vijayendra R Desai, page No. 108.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ | ಪ |
ಪರಿಪರಿ ಶಾಸ್ತ್ರವ ನೋಡಿದರೇನು ವ್ಯರ್ಥವಾಯಿತು ಯುಕುತಿ | ಅಪ |

ಆರುಶಾಸ್ತ್ರವನೋದಿದರೇನು ಮೂರಾರು ಪುರಾಣ ಮುಗಿಸಿದರೇನು
ಸಾರಿ ಸಜ್ಜನರ ಸಂಗವ ಮಾಡದೆ ಧೀರನೆಂದು ತಾ ತಿರುಗಿದರೇನು || ೧ ||

ಕೊರಳೊಳು ಮಾಲೆಯ ಧರಿಸಿದರೇನು ಬೆರಳೊಳು ಜಪಮಣಿ ತಿರುವಿದರೇನು
ಮರಳಿ ಮರಳಿ ತಾ ಹೊರಳಿ ಬೂದಿಯೊಳು ಮರುಳನಂದದಿ ತಿರುಗಿದರೇನು || ೨ ||

ಧಾರಿಣಿಯೆಲ್ಲ ಆಳಿದರೇನು ಶರೀರ ಸುಖವ ಬಿಡಿಸಿದರೇನು ಮಾರಜನಕ ಸಿರಿ
ಪುರಂದರವಿಠಲನ ಸಾರಮಹಿಮೆಗಳ ತೋರಬಲ್ಲ ಸದ್ಗುರುವಿನ ಗುಲಾಮನಾಗುವತನಕ || ೩ ||

**ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ | ಪ |**

ಪುರುಂದರ ದಾಸವರೇಣ್ಯರ ಪದದ ಪ್ರಸಿದ್ಧ ಮಾತು.
ಸದ್ಗುರು ಪಡೆಯ ಬೇಕು. ಅಪಾರ ಸೇವೆ ಮಾಡಬೇಕು. ಪರಮಾತ್ಮನ ಮಹಾತ್ಮೆಯ ಜ್ಞಾನ ಹೊಂದಬೇಕು. ಉದ್ಧರಿತರಾಗಬೇಕು.
ಮೇಲರ್ಥಕ್ಕೆ ತೋರಿ ಬರುವ ವೈಕುಂಠದ ದಾರಿ.

ಗುರುವಿನ ಗುಲಾಮ ಅಂದರೇನು?

ಗುರು ಸೇವೆ ಮಾಡಬೇಕು. ಗುರು ಗೌರವ ಸಲ್ಲಿಸ ಬೇಕು. ಗುರು ಸಮರ್ಪಣೆ ಮಾಡಿಕೊಳ್ಳ ಬೇಕು. ಗುರುವಿನಿಂದ ಎಲ್ಲ ಹರಿ ಮಹಾತ್ಮೆಯ ಜ್ಞಾನ ಪಡೆಯುವದಕ್ಕಾಗಿ.

ಪರಶುರಾಮ ಗುರು. ಭೀಷ್ಮಾಚಾರ್ಯ ಶಿಷ್ಯ. ದ್ರೋಣಾಚಾರ್ಯ ಗುರು. ಅರ್ಜುನ ಶಿಷ್ಯ.

ಅಷ್ಟೇ ಏಕೆ? ಲೋಕ ಶಿಕ್ಷಣಕ್ಕಾಗಿ ಜಗದ್ಗುರು ಶ್ರೀಕೃಷ್ಣ ಶಿಷ್ಯ. ಸಾಂದೀಪಿನಿ ಋಷಿ ಗುರು. ಹೀಗೆ ಜ್ಞಾನದ ಮೂಲ ಗುರು ಎಂದು ಇತಿಹಾಸ ಸಾರುತ್ತದೆ.

ದೈಹಿಕ ಗುಲಾಮತ್ವ ಸಾಕೇ? - ಇಲ್ಲ. ಅರಿವೇ ಗುರು. ಅಂದರೆ ಜ್ಞಾನವೇ ಗುರು.

ಅರ್ಥಾತ್ ಜ್ಞಾನದ ಗುಲಾಮನಾಗ ಬೇಕು. ಗುಲಾಮ ಎಂದರೆ ಅಧೀನವಾಗಿರುವದು.

ನಾವು ಜ್ಞಾನದ ಅಧೀನರಾಗ ಬೇಕು. ವಿವೇಕ ಭರಿತ ಜ್ಞಾನ ಹೇಳಿದಂತೆ ಕೇಳಬೇಕು. ಜ್ಞಾನದ ಬೆಳಕಿನಲ್ಲಿ ನಡೆಯ ಬೇಕು.

ಗುರು ನಮಗೆ ಪ್ರತ್ಯಕ್ಷವಾಗಿ ಏನು ಕೊಡುತ್ತಾನೆ? ಜ್ಞಾನವನ್ನು ತಾನೇ. ಅದಕ್ಕಾಗಿ ಜ್ಞಾನ ಗುರುವಿನ ಸಂಕೇತ. ಸಮೀಚೀನ ಜ್ಞಾನದಂಥ ಗುರು ಮತ್ತೊಂದಿಲ್ಲ.

'ಜ್ಞಾನೇನೈವ ಪರಂ ಪದಂ'-- ಪರಮಪದವಾದ ಮುಕ್ತಿಗೆ ಜ್ಞಾನವೇ ಸಾಧನ

ಶ್ರವಣ ಮನನಾದಿಗಳಿಂದ ಪಡೆದು, ಅನುಸಂಧಿಸಿ ಅನುಭವಿಸಿ, ಪರಮಾತ್ಮನನ್ನು ಆರಾಧಿಸ ಬೇಕು. ಉಪಾಸಿಸ ಬೇಕು.

ಪರಮಾತ್ಮನ ಉಪಾಸನೆಯಲ್ಲಿ ಕೊನೆಗೊಳ್ಳುವ ಜ್ಞಾನವೇ, ನಿಜ ಜ್ಞಾನ ಎನ್ನುತ್ತಾರೆ ಶ್ರೀ ಮದ್ ಟೀಕಾಕೃತ್ಪಾದರು.

**ಪರಿಪರಿ ಶಾಸ್ತ್ರವ ನೋಡಿದರೇನು ವ್ಯರ್ಥವಾಯಿತು ಯುಕುತಿ | ಅಪ |**

**ಆರುಶಾಸ್ತ್ರವನೋದಿದರೇನು ಮೂರಾರು ಪುರಾಣ ಮುಗಿಸಿದರೇನು**
**ಸಾರಿ ಸಜ್ಜನರ ಸಂಗವ ಮಾಡದೆ ಧೀರನೆಂದು ತಾ ತಿರುಗಿದರೇನು || ೧ ||**

ಇನ್ನು ವಿವಿಧ ಶಾಸ್ತ್ರಗಳ, ಹದಿನೆಂಟು ಪುರಾಣಗಳ ಓದಿದ. ಸರ್ವೋತ್ತಮನ ಉಪಾಸನೆಯಲ್ಲಿ ಕೊನೆಗೊ ಳ್ಳಲಿಲ್ಲ ಈ ಜ್ಞಾನ. ಅದು ವ್ಯರ್ಥ. ಒಣ ಪಾಂಡಿತ್ಯ. ಸಾಧನೆಯ ದಾರಿಗೆ ಸಲ್ಲದು.

ಅದಕ್ಕಾಗಿ ದಾಸರು ಸಾರುತ್ತಾರೆ - ಜ್ಞಾನ ಭಕ್ತಿ ವಿರಕ್ತಿ ಗಳಿಸದ, ಅನುಷ್ಠಾನಕ್ಕೆ ಬರದ, ನೂರೆಂಟು ಶಾಸ್ತ್ರ ಪುರಾಣಗಳ ಓದು, ಯಾತಕ್ಕೂ ಬಾರದು. ಒಣ ತರ್ಕದ ಜಾಣ್ಮೆ ವ್ಯರ್ಥ. ವಾದ ವಿವಾದ ವಿಫಲ.

ಗುರು ದೊರೆಯ ಬೇಕು. ಸಜ್ಜನರ ಸಂಗವೆಂಬ ಗುರು ದೊರೆಯ ಬೇಕು. ಸಜ್ಜನರ ಸಂಗ ಜ್ಞಾನ ಭಕುತಿ ಎಂಬ ಹೆಜ್ಜೇನು ಸವಿದಂತೆ. ಪರಮಾತ್ಮನ ಮಹಾತ್ಮೆ ಎಂಬ ಕಲ್ಲು ಸಕ್ಕರೆ ಸವಿದಂತೆ.

ಇಂಥ ಜ್ಞಾನ, ಭಕ್ತಿ ಎಂಬ ಗುರುವಿನ ಗುಲಾಮನಾಗ ಬೇಕು.

ಸಜ್ಜನರ ಸಂಗ ಮಾಡಬೇಕು. ಸಜ್ಜನರೆಂದರೆ ಜ್ಞಾನಿಗಳು. ಗುರುವಿನ ಮೂಲಕ ಸತ್ ಶಾಸ್ತ್ರ ಅರಿಯಬೇಕು. ಅದು ಗುರು ಪ್ರಸಾದ. ಗುರು ಪ್ರಸಾದೋ ಬಲವಾನ್. ಆ ಜ್ಞಾನ ಅಂತಃಕರಣಕ್ಕೆ ಮುಟ್ಟುತ್ತದೆ. ಗುರು ಪ್ರಸಾದ ಹರಿಪ್ರಸಾದಕ್ಕೆ ಸೋಪಾನ.

ವೇದ ಗಮ್ಯ ಪರಮಾತ್ಮ. ವೇದ, ವಿದ ಅಂದರೆ To Know - knowledge -ಅರ್ಥಾತ್ ತಿಳಿಯುವದು. ಓದಬೇಕು. ಅರ್ಥಮಾಡಿ ಕೊಳ್ಳಬೇಕು. ಅನುಷ್ಠಾನದಲ್ಲಿ ತರಬೇಕು. ಅದು ಅರಿವು. ಅದುವೇ ಗುರು. ಅದುವೇ ಮಹತ್ತರವಾದದ್ದು. ಅದರ ಗುಲಾಮ ನಾವಾಗ ಬೇಕು.

**ಕೊರಳೊಳು ಮಾಲೆಯ ಧರಿಸಿದರೇನು ಬೆರಳೊಳು ಜಪಮಣಿ ತಿರುವಿದರೇನು**
**ಮರಳಿ ಮರಳಿ ತಾ ಹೊರಳಿ ಬೂದಿಯೊಳು ಮರುಳನಂದದಿ ತಿರುಗಿದರೇನು ||೨||**

ಜ್ಞಾನದ ಬೆಳಕು ಡಂಬಾಚಾರದ ಕತ್ತಲನ್ನು ಓಡಿಸ ಬೇಕು.
ಪರಮಾತ್ಮನ ಮಹಾತ್ಮೆಯ ಜ್ಞಾನವಿಲ್ಲದೇ, ಅಂತಃಕರಣದಲ್ಲಿ ಮಾಗಿದ ಭಕ್ತಿಯಿಲ್ಲದೇ --
ಕೊರಳಲ್ಲಿ ತುಳಸಿಮಾಲೆ ಧರಿಸಿ, ಭಸ್ಮಾದಿ ಬಳಿದು ಕೊಂಡು, ಕೈಯಲ್ಲಿ ಜಪಮಾಲೆ ತಿರುವುತ್ತ ತಾನು ದೊಡ್ಡ ಜ್ಞಾನಿ, ದೊಡ್ಡ ಮನುಷ್ಯನೆಂದು ಊರೆಲ್ಲ ಸುತ್ತಿದರೆ ವ್ಯರ್ಥವಾಯಿತು. ಹೊಳೆಯಲ್ಲಿ ಹುಣಸೀಹಣ್ಣು ತೊಳೆದಂತೆ. ಬಾಹ್ಯಾಡಂಬರವಾಯಿತು. ಹುರಳು ಇಲ್ಲದೆ ಮರುಳನಾದ. ಸಾಧನೆಯಾಗಲಿಲ್ಲ. ಉದರ ಪೋಷಣೆಗೆ ನಾಟಕವಾಯಿತು. ಉದರ ವೈರಾಗ್ಯವಾಯಿತು. ಜನರ ಮೋಸ ಮಾಡಬಹುದು. ಜನಾರ್ಧನನಲ್ಲ. ಆತ್ಮ ವಂಚನೆ ಆಯ್ತು. ಪರಮಾತ್ಮನ ಪಡೆಯಲಿಲ್ಲ. ಸಾಧನೆ ಸಾಧಿಸಲಿಲ್ಲ.

**ಧಾರಿಣಿಯೆಲ್ಲ ಆಳಿದರೇನು ಶರೀರ ಸುಖವ ಬಿಡಿಸಿದರೇನು**
**ಮಾರಜನಕಸಿರಿ ಪುರಂದರವಿಠಲನ ಸಾರಮಹಿಮೆಗಳ ತೋರಬಲ್ಲ ಸದ್ಗುರುವಿನ ಗುಲಾಮನಾಗುವತನಕ ||೩||**

ಇಲ್ಲ, ನಾನು ಧಾರುಣಿಯನಾಳುವ ದೊರೆ. ಬೇಕು ನನಗೆ ಮುಕುತಿ, ಎಂದರೆ ಇಲ್ಲಾ.
ಧರೆಯ ದೊರೆತನ ಪ್ರಯೋಜನವಿಲ್ಲ. ಪಂಡಿತ, ಪಾಮರ ಭೇದವಿಲ್ಲ. ಬಡವ ಬಲ್ಲಿದ ಸಲ್ಲ.
ಜ್ಞಾನವೆಂಬ ಗುರುವಿನ ಗುಲಾಮನಾಗು. ಅರಿವಿನ ದೊರೆ ಆಗು. ಆಗ ಬಾ ಮಕುತಿಗೆ!
ಓಹ್! ನಾನು ಸರ್ವಸಂಗ ಪರಿತ್ಯಾಗಿ. ವಿರಕ್ತ ಶಿಖಾಮಣಿ. ಮಹಾನ ತಪಸ್ವಿ ಅನ ಬೇಡ – ಆದರೂ ಇಲ್ಲ. ಅಂದರೂ ಇಲ್ಲ ಮುಕುತಿ.
ಯುಕುತಿಯಿಂದ ಪರಮಾತ್ಮನ ಸಾರ ಮಹಿಮೆ ತಿಳಿಯಲು ಗುರುವಿನ ಗುಲಾಮನಾಗುವತನಕ, ಮತ್ತೆ ಅಪಾರ ಭಕುತಿಯೆಂಬ ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ.
ಸಮೀಚೀನ ಜ್ಞಾನ, ಭಕ್ತಿ ಎಂಬ ಸದ್ಗುರು ಸಿಗಬೇಕು. ಇಂಥ ಗುರುವಿನ ಗುಲಾಮನಾಗ ಬೇಕು. ಅಂದರೆ ಗುರುಸೇವೆ ಮಾಡಿ ಜ್ಞಾನ ಭಕ್ತಿ ಪಡೆಯಬೇಕು.

ಏನಿದು ಸಮೀಚೀನ ಜ್ಞಾನ?
ಸಕಲ ಸತ್ ಶಾಸ್ತ್ರ, ಸದಾಗಮಗಳ ಸಾರ ತಿಳಿಸಿ ಕೊಡುವವನೇ ಸದ್ಗುರು. ಇದುವೇ ಸುಜ್ಞಾನ.

ಪರಮಾತ್ಮನಲ್ಲಿ ಸುಜ್ಞಾನ ಭರಿತ ನಿರಂತರ ಧೃಡ ಪ್ರೇಮ ಪ್ರವಾಹವೇ ಪಕ್ವ ಭಕ್ತಿ.
ಇಂಥ ಸದ್ಗುರು - ಸುಜ್ಞಾನ, ಸದ್ ಭಕ್ತಿಗಳ ಗುಲಾಮ ನಾದಾಗ ದೂರವಿಲ್ಲ ಮುಕುತಿ.
ಅಧ್ಯಾತ್ಮ ಜ್ಞಾನ ಕೊಟ್ಟು ಸಾಧನೆಯ ದಾರಿಯಲ್ಲಿ ಮುನ್ನಡೆಸುವ ಇಲ್ಲಿಯ ಗುರು ಒಬ್ಬ.
ಇವರೆಲ್ಲರ ಗುರು, ಪರಮಗುರು ವಾಯು ದೇವರು.
ಈ ಪರಮ ಗುರುವಿನ ಗುರು – ಪರಮ ಪರಮ ಗುರುವೇ ಪರಮಾತ್ಮ ಶ್ರೀಹರಿ - ಜಗದ ಗುರು.
ಈ ಎಲ್ಲ ಗುರುಗಳ ಗುಲಾಮನಾಗ ಬೇಕು. ಅಂದರೆ ತನು, ಮನದಿಂದ ಅವರ ಸೇವಿಸಿ ಅವರಿಂದ ಸುಜ್ಞಾನ ಪಡೆಯ ಬೇಕು. ಸದ್ ಭಕ್ತಿ ಸಾಧಿಸಬೇಕು. ಸುಜ್ಞಾನ ಭಕ್ತಿಗಳ ಬೆಳಕಿನಲ್ಲಿನಡೆಯ ಬೇಕು ಆಗ.
ಒಂದೇ ಕೂಗಳತೆ ವೈಕುಂಠ ಎಂದರು ದಾಸವರೇಣ್ಯರು.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ